ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 400 ಜಿಪಅ 18

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:25.10.2018

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬೆಂಗಳೂರು.

ನೊಂದಾಯಿತ ಅಂಚೆ

ಇವರಿಗೆ:

1. ಮುಖ್ಯ ಇಂಜಿನಿಯರ್,
ಪಂಚಾಯ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಗ್ರಾಮೀಣಾಭಿವೃದ್ಧಿ ಭವನ,
ಆನಂದರಾವ್ ವೃತ್ತ,
ಬೆಂಗಳೂರು.

2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಎಲ್ಲಾ ಜಿಲ್ಲಾ ಪಂಚಾಯತ್‌ಗಳು

ಮಾನ್ಯರೆ,

ವಿಷಯ:-ಅಧಿಸೂಚನೆ ಸಂಖ್ಯೆ:ಗ್ರಾಅಪ 205 ಸೇಶಿಕಾ 2014, ದಿನಾಂಕ:9.5.2017 ರ ಮೂಲಕ ರಚಿಸಲಾದ ವಿಶೇಷ ನಿಯಮಗಳಡಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಂಡಿರುವ ನೌಕರರ ನಿವೃತ್ತಿ ಅಂಶಧಾನದ ಬಗ್ಗೆ.

((($)))

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಗ್ರಾ.ಅ.ಪಂ.ರಾಜ್ ಇಲಾಖೆಯು ಹಿಂದಿನ ಡಿ.ಆರ್.ಡಿ.ಎಸ್, ಟಿ.ಡಿ.ಬಿ ಗಳಿಂದ ಜಿಲ್ಲಾ ಪರಿಷತ್‌ಗಳಲ್ಲಿ ವಿಲೀನಗೊಂಡು ಜಿಲ್ಲಾ ಪಂಚಾಯತ್‌ಗಳು ಅಸ್ತಿತ್ವಕ್ಕೆ ಬಂದ ನಂತರ ಅವುಗಳಲ್ಲಿ ಮುಂದುವರಿದಿದ್ದ ಸುಮಾರು 878 ವಿವಿಧ ವೃಂದದ ನೌಕರರನ್ನು ಅಧಿಸೂಚನೆ ಸಂಖ್ಯೆ:ಗ್ರಾಅಪ 205 ಸೇಶಿಕಾ 2014, ದಿನಾಂಕ:9.5.2017 ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಸೇವೆಗಳು (ಹಿಂದಿನ ಡಿ.ಆರ್.ಡಿ.ಎಸ್, ಟಿ.ಡಿ.ಬಿ ಮತ್ತು ಜಿಲ್ಲಾ ಪರಿಷತ್ ನೌಕರರ ವಿಲೀನಾತಿ) (ವಿಶೇಷ) ನಿಯಮಗಳು- 2016 ನ್ನು ರಚಿಸುವ ಮೂಲಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ.

ಸದರಿ ನಿಯಮಗಳ ಸೆಕ್ಷನ್ 4(1) ರ ಅನುಸಾರ ವಿಲೀನಗೊಂಡ ನೌಕರರು ಹಿಂದಿನ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಹಿಂದಿನ ತಾಲ್ಲೂಕು ಅಭಿವೃದ್ಧಿ ಮಂಡಳಿ ಹಾಗೂ ಜಿಲ್ಲಾ ಪರಿಷತ್‌ಗಳಲ್ಲಿ ಸಲ್ಲಿಸಿದ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯನ್ವಯ ಸರ್ಕಾರಕ್ಕೆ ನಿವೃತ್ತಿ ವೇತನ ಅಂಶಧಾನವನ್ನು ಪಾವತಿಸುವ ಷರತ್ತಿಗೆ ಒಳಪಟ್ಟು ರಜೆ, ಜೇಷ್ಠತೆ, ವೇತನ ಹಾಗೂ ಪಿಂಚಣಿಯ ಉದ್ದೇಶಕ್ಕಾಗಿ ಪರಿಗಣಿಸಲಾಗುವುದೆಂದು ತಿಳಿಸಲಾಗಿದೆ.

ಈ ರೀತಿ ವಿಲೀನಗೊಂಡು ನಿವೃತ್ತಿ ಹೊಂದಿರುವ ಕೆಲವೊಂದು ನೌಕರರು ಅವರುಗಳು ಜಿಲ್ಲಾ ಪರಿಷತ್‌ಗಳಲ್ಲಿ ಸೇವೆ ಸಲ್ಲಿಸಿದ ಅವದಿಗೆ ಮಾತ್ರ ನಿವೃತ್ತಿ ಅಂಶಧಾನವನ್ನು ಲೆಕ್ಕಚಾರ ಮಾಡಿ ಪಾವತಿಸಿ ನಿವೃತ್ತ ವೇತನದ ಮಂಜೂರಾತಿ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ವಾಸ್ತವವಾಗಿ ಸೆಕ್ಷನ್ 4(1) ರಲ್ಲಿ ತಿಳಿಸಿರುವಂತೆ ವಿಶೇಷ ನಿಯಮಗಳ ಮೂಲಕ ಪಂಚಾಯತ್ ರಾಜ್ ಇಂಜಿನಿಯರಿಂಗ್

ಇಲಾಖೆಯ ಸೇವೆಯಲ್ಲಿ ವಿಲೀನಗೊಂಡಿರುವ ನೌಕರರು ಅವರುಗಳು ಸೇವಾ ಸಕ್ರಮಾತಿ/ಸೇವಾ ವಿಲೀನಾತಿ ಹೊಂದಿದ ದಿನಾಂಕದಿಂದ ವಿಶೇಷ ನಿಯಮಗಳನ್ನು ಹೊರಡಿಸಿದ ದಿನಾಂಕದವರಗೆ ಅಂದರೆ ದಿನಾಂಕ:09.5.2017 ರವರಗೆ ನಿವೃತ್ತಿ ಅಂಶಧಾನವನ್ನು ಲೆಕ್ಕಚಾರ ಮಾಡಿ, ಪಾವತಿಸಬೇಕಾಗಿರುತ್ತದೆ. ಆದ್ದರಿಂದ, ಸಕ್ಷಮ ಪ್ರಾಧಿಕಾರಗಳು ಪ್ರಸಕ್ತ ವಿಶೇಷ ನಿಯಮಗಳ ಮೂಲಕ ಪಂ.ರಾ.ಇಂ ಇಲಾಖೆಯಲ್ಲಿ ವಿಲೀನಾತಿ ಪಡೆದು ನಿವೃತ್ತಿ ಹೊಂದಿದ ನೌಕರರಿಗೆ ಪಿಂಚಣಿ ಪ್ರಸ್ತಾವನೆಯನ್ನು ಸಲ್ಲಿಸುವ ಪೂರ್ವದಲ್ಲಿ ಮೇಲೆ ತಿಳಿಸಿರುವಂತೆ ನಿವೃತ್ತಿ ಅಂಶದಾನವನ್ನು ಪಾವತಿಸಿರುವರೇ **(ಸದರಿ ನೌಕರರು ಸಕ್ರಮಗೊಂಡ ದಿನಾಂಕದಿಂದ ದಿನಾಂಕ:9.5.2017ರವರಗೆ)** ಎಂಬ ಬಗ್ಗೆ ಪರಿಶೀಲಿಸಿ, ಖಚಿತಪಡಿಸಿಕೊಂಡ ನಂತರ ನಿವೃತ್ತಿ ವೇತನ ಮಂಜೂರಾತಿಗೆ ಕ್ರಮವಹಿಸಬಹುದೆಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

25/10/2018

(ಎಸ್.ರಂಗನಗೌಡ)

ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.